## 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ಚನ್ನಗಿರಿ, ನ್ಯಾಯಾಲಯದಲ್ಲಿ

**ಸಿಸಿ ನಂ:976/2025**

| **ಪಿರ್ಯಾದುದಾರರು** | **ವಿರುದ್ಧ** | **ಆರೋಪಿ:** |
|---|---|---|
| ಚನ್ನಗಿರಿ ಪೊಲೀಸ್ ಠಾಣೆ | | ಎ1. ಸಚಿನ್ ಜಾಧವ್ ಬಿನ್ ಕಿಶನ್ ದೊಂಡಿ ರಾಮ್ ಜಾಧವ್, ವಯಸ್ಸು: 32 ವರ್ಷ ವಾಸಃ ಬೋಸಾರೆ ಗ್ರಾಮ, ಕಟಾವ ತಾಃ ಸತಾರ ಜಿಲ್ಲೆ , ಮಹಾರಾಷ್ಟ್ರ |

**<u>ಆಪಾದನೆ</u>**

ನಾನು ಮಹಾಲಕ್ಷ್ಮಿ ಜಿ 1ನೇ ಹೆಚ್ಚುವರಿ ಸಿವಿಲ್.ನ್ಯಾ.ದಂಡಾಧಿಕಾರಿ, ಚನ್ನಗಿರಿ ಈ ಮೂಲಕ ನಿಮ್ಮ ಮೇಲೆ ಅಪಾಧಿಸುವುದೇನೆಂದರೆ ಆರೋಪಿತರಾದ ನೀವು:-

ಮೊದಲನೆಯದಾಗಿ ದಿಃ 25-07-2024 ರಂದು ಸಂಜೆ 6.30 ಗಂಟೆ ಸಮಯದಲ್ಲಿ ಚನ್ನಗಿರಿ ಪೊಲೀಸ್ ಠಾಣಾ ವ್ಯಾಪ್ತಿಯ ನುಗಿಹಳ್ಳಿ ಕ್ರಾಸ್ ಹತ್ತಿರ ನುಗ್ಗಿಹಳ್ಳಿ ಗ್ರಾಮದ ಬಸವರಾಜಪ್ಪ ಇವರ ಅಡಿಕೆ ತೋಟದ ಜಮೀನಿನ ಮುಂದೆ ಹಾದುಹೋಗಿರುವ ಸಂತೆಬೆನ್ನೂರು-ಚನ್ನಗಿರಿ ರಾಜ್ಯ ಹೆದ್ದಾರಿ ರಸ್ತೆಯಲ್ಲಿ ಆರೋಪಿಯಾದ ನೀನು ತನ್ನ ಎಂಹೆಚ್-42/ಟಿ-0704 ನೇಲಾರಿಯನ್ನು ಸಂತೆಬೆನ್ನೂರು ಕಡೆಯಿಂದ ಅತೀ ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ತನ್ನ ಮುಂದೆ ದೇವರಹಳ್ಳಿ ಕಡೆ ಹೋಗಲು ಕೆಎ-17/ಹೆಚ್ ಪಿ-6383 ನೇ ಮೋಟಾರ್ ಬೈಕ್ ನ್ನು ಓವರ್ ಟೇಕ್ ಮಾಡಿ ಬೈಕಿನ ಮುಂದೆ ಬಂದು ಅರೋಪಿ ಲಾರಿ ಚಾಲಕನು ಯಾವುದೇ ಮೂನ್ಸೂಚನೆ ನೀಡದೇ ಒಮ್ಮೆಲೆ ಏಕಾ ಏಕಿ ಲಾರಿಗೆ ಬ್ರೇಕ್ ಹಾಕಿ ಸ್ಲೋ ಮಾಡಿದ್ದರಿಂದ ಮೇಲ್ಕಂಡ ಬೈಕ್ ಚಾಲಕ ಕೇಶವಮೂರ್ತಿ ಲಾರಿಯ ಹಿಂದಿನ ಭಾಗಕ್ಕೆ ಡಿಕ್ಕಿಯಾಗಿ ಅಪಘಾತವಾಗಿ ಬೈಕ್ ಸಮೇಶ ರಸ್ತೆಗೆ ಬಿದ್ದಿರುತ್ತಾನೆ, ಆ ಕಾರಣ ಕಲಂ 281 ಬಿ ಎನ್ ಎಸ್ ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆ ಒಳಗೆ ಎಸಗಿರುವಿರಿ ಎಂದು ಆಪಾದಿಸಿದೆ.

ಎರಡನೇಯದಾಗಿ ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ಆರೋಪಿಯಾದ ನೀನು ತನ್ನ ವಾಹನವನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ಮೇಲ್ಕಂಡ ಬೈಕಿಗೆ ಡಿಕ್ಕಿಪಡಿಸಿದ ಪರಿಣಾಮ ಬೈಕ್ ಸವಾರ ಕೇಶವಮೂರ್ತಿ ಬೈಕ್ ಸಮೇಶ ರಸ್ತೆಗೆ ಬಿದ್ದ ಚಿರಿಣಾಮ ಅವರ ತಲೆಗೆ , ಮುಖಕ್ಕೆ , ಮತ್ತು

ಮೈ ಕೈ ಗೆ ಬಲವಾದ ಪೆಟ್ಟು ಬಿದ್ದು ತೀವ್ರ ರಕ್ತಸ್ರಾವಾಗಿದ್ದವನನ್ನು ಚಾಸಾ-9ರವರು ಉಪಚರಿಸಿ ಚಾಸಾ-1ರವರು ಸದರಿಯವರನ್ನು ಹೆಚ್ಚಿನ ಚಿಕಿತ್ಸೆಗೆ ಶಿವಮೊಗ್ಗದ ಮ್ಯಾಕ್ಸ್ ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆ ಕೊಡಿಸಿದ್ದರು ಸಹ ಚಿಕಿತ್ಸೆ ಫಲಕಾರಿಯಾಗದೇ ಸದರಿ ಕೇಶವಮಾರ್ತಿ ಮೃತಪಟ್ಟಿರುತ್ತಾರೆ ಆದ್ದರಿಂದ ನಿಮ್ಮ ವಿರುದ್ದ ಕಲಂ 106(1) ಬಿ ಎನ್ ಎಸ್ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆ ಒಳಗೆ ಎಸಗಿರುವಿರಿ ಎಂದು ಆಪಾದಿಸಿದೆ.

ದಿನಾಂಕಃ 19-12-2025

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನಗಿರಿ.**

**1ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ಚನ್ನಗಿರಿ, ನ್ಯಾಯಾಲಯದಲ್ಲಿ**

**ಸಿಸಿ ನಂ: 976/2025**

| **ಪಿರ್ಯಾದುದಾರರು** | **ವಿರುದ್ಧ** | **ಆರೋಪಿ:** |
|---|---|---|
| ಚನ್ನಗಿರಿ  ಪೊಲೀಸ್ ಠಾಣೆ | | ಎ1. ಸಚಿನ್ ಜಾಧವ್ ಬಿನ್ ಕಿಶನ್ ದೊಂಡಿ ರಾಮ್ ಜಾಧವ್,  ವಯಸ್ಸುಃ 32 ವರ್ಷ ವಾಸಃ  ಬೋಸಾರೆ  ಗ್ರಾಮ, ಕಟಾವ ತಾಃ ಸತಾರ ಜಿಲ್ಲೆ , ಮಹಾರಾಷ್ಟ್ರ |

## ಆರೋಪಿಯ  ಹೇಳಿಕೆ

1. ಈಗ ಓದಿ ಹೇಳಿದ ನಿನ್ನ ಮೇಲಿನ ಆಪಾದೆನೆಯನ್ನು ಕೇಳಿದ್ದಿಯಾ? ತಿಳಿಯಿತೇ?

ಉತ್ತರಃ

2. ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆಯಾಗಬೇಕೋ?

ಉತ್ತರಃ

(ಆರೋಪಿತನಿಗೆ ಆರೋಪಣೆಯ ಸಾರಾಂಶವನ್ನು ದಿನಾಂಕಃ 19-12-2025 ರಂದು ತೆರೆದ ನ್ಯಾಯಾಲಯದಲ್ಲಿ ಓದಿ ಕೇಳಿ ಅವನುಃಳು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.)

ದಿನಾಂಕಃ 19-12-2025

**1ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನಗಿರಿ.**